396(738) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ್) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳು ಹಾಗು ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು :

ಆ) ಸಂಚಾರಿ ಪಶುವೈದ್ಯಕೀಯ ಸೇವೆ ಚಾಲನೆಯಲ್ಲಿದೆಯೇ :

ಇ) ಇಲ್ಲವಾದಲ್ಲಿ ಈ ಸೇವೆಯನ್ನು ಯಾವಾಗ ಒದಗಿಸಲಾಗುತ್ತಿದೆ ;

ಈ) ಕುಂದಗೋಳ ತಾಲ್ಲೂಕಿನಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳೆಷ್ಟು ;

ಉ) ಪಶುವೈದ್ಯರ ಕೊರತೆ ಸರ್ಕಾರದ ಗಮನಕ್ಕೆ ಬಂದಿದೆಯೇ: ಎಷ್ಟು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆ, ಸರ್ಕಾರ ಕೊರತೆಯನ್ನು ತುಂಬಲು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಪಟೇಲ್(ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು)

ಅ) ಒಟ್ಟು 6 ಪಶು ಆಸ್ಪತ್ರೆಗಳು ಮತ್ತು 34 ಪಶು ಚಿಕಿತ್ಸಾಲಯಗಳು ಧಾರವಾಡ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಆ) ಸಂಚಾರಿ ಪಶು ಚಿಕಿತ್ಸಾಲಯ ಸೇವೆ ಪ್ರಸ್ತುತ ಚಾಲನೆಯಲ್ಲಿಲ್ಲ.

ಇ) ಪಶುವೈದ್ಯರ ಹುದ್ದೆ ಭರ್ತಿಯಾಗಿ ವಾಹನ ದುರಸ್ಥಿ ನಂತರ ಸೇವೆಯನ್ನು ಒದಗಿಸಲಾಗುವುದು.

ಈ) ಒಂದು ಪಶು ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ

ಉ) ಬಂದಿದೆ. 21 ಸಂಸ್ಥೆಗಳಲ್ಲಿ ಪಶುವೈದ್ಯರ ಕೊರತೆ ಇದೆ. ರಾಜ್ಯದಲ್ಲಿ 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿ ಅಂತಿಮ ನಿಯಮದಡಿಯಲ್ಲಿ ನೇಮಕ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 192 ಗುತ್ತಿಗೆ ಪಶು ವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಬೀದರ್‌ನಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯ

401(1096) : ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ (ಬಿಜಾಪುರ) : ಪಟ್ಟಣ ಕಟ್ಟಿ (ಬಿಜಾಪುರ) ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿರುವ ಬೃಹತ್ ಮತ್ತು ಚಿಕ್ಕ ಕೈಗಾರಿಕೆಗಳು ಎಷ್ಟು;

ಆ) ಅವು ಯಾವುವು :

ಇ) ಈ ಕೈಗಾರಿಕೆಗಳು ಎಷ್ಟು ಜನರಿಗೆ ಬೃಹತ್ ಉದ್ಯೋಗ ದೊರಕಿಸಿದೆ: (ಪೂರ್ಣ ಉದ್ಯೋಗ ಅವಕಾಶ ನೀಡಿ ವಿವರ ನೀಡಿ)

ಈ) 2003–04ನೇ ಸಾಲಿನಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಅನುಮತಿ ನೀಡಲಾಗಿದೆ(ವಿವರ ನೀಡುವುದು)

ಉ) ಇವುಗಳಿಗೆ ನೀಡಲಾದ ಅನುದಾನದ ಪ್ರಮಾಣ ಎಷ್ಟು :

ಊ) ಬಿಜಾಪುರ ನಗರದಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಬಾಕಿ ಇರುವ ಪ್ರಕರಣಗಳು ಎಷ್ಟು ;

ಋ) ಯಾವಾಗ ಅನುಮತಿ ನೀಡಲಾಗುವುದು?